# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 38 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 27-01-2026 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಕಸ ನಿರ್ವಹಣೆ ಮತ್ತು ಒಳಚರಂಡಿ ಯೋಜನೆಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ: (ವಿವರ ನೀಡುವುದು); | **ಪೌರಾಡಳಿತ ನಿರ್ದೇಶನಾಲಯ:**<br><br>ಪೌರಾಡಳಿತ ನಿರ್ದೇಶನಾಲಯ ವಿವಿಧ ಯೋಜನೆಗಳಾದ ಘನತ್ಯಾಜ್ಯ ವಸ್ತು ನಿರ್ವಹಣೆ, ಕುಡಿಯುವ ನೀರು (SFC Tied, SFC Untied & Special grants) ಮತ್ತು ಒಳಚರಂಡಿ ನಿರ್ವಹಣೆಯ ಕುರಿತು ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ.<br>1. **ಘನತ್ಯಾಜ್ಯ ವಸ್ತು ನಿರ್ವಹಣೆ:** ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಉತ್ಪಾದನೆಯಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಕೈಗೊಂಡಿರುವ ಕ್ರಮದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.<br>2. **ಕುಡಿಯುವ ನೀರು:** ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ನಿರ್ವಹಣೆ ಕುರಿತು ಕೈಗೊಂಡಿರುವ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಿದೆ.<br>3. **ಒಳಚರಂಡಿ ನಿರ್ವಹಣೆ:** ಸರ್ಕಾರದ ಆದೇಶ ಸಂಖ್ಯೆ: UDD 5 CSS 2023, ದಿನಾಂಕ: 19.07.2023 ರಂತೆ ಸ್ವಚ್ಛ ಭಾರತ್ ಮಿಷನ್ (ನಗರ) - 2.0 ಯೋಜನೆಯಡಿ ಘಟಕವಾದ ಬಳಸಿದ ನೀರು ನಿರ್ವಹಣೆ (Used Water Management) ಘಟಕದ ಅನುಷ್ಠಾನವನ್ನು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ.ಯು.ಐ.ಡಿ.ಎಫ್.ಸಿ) ವತಿಯಿಂದ ಕೈಗೊಳ್ಳಲಾಗುತ್ತಿದೆ.<br>4. **ಕುಡಿಯುವ ನೀರು (SFC Tied, SFC Untied & Special grants):** ಎಸ್.ಎಫ್.ಸಿ. ಕುಡಿಯುವ ನೀರು ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ.<br>• ಬಿಡುಗಡೆ ಮಾಡುವ ಅನುದಾನಕ್ಕೆ ನಗರ ಸ್ಥಳೀಯ ಸಂಸ್ಥೆಗಳು, ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ Task Force ಅನ್ನು ರಚಿಸಿಕೊಂಡು, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಅವಶ್ಯವಿರುವ ಕಾಮಗಾರಿಗಳ ಕ್ರಿಯಾಯೋಜನೆಯನ್ನು ತಯಾರು ಮಾಡಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. |

| | | |
|---|---|---|
| | | • ಬಿಡುಗಡೆ ಮಾಡುವ ಅನುದಾನದಡಿ ಕೊಳವೆ ಬಾವಿಗಳನ್ನು ಆಳಗೊಳಿಸುವುದು, ಸ್ವಚ್ಛಗೊಳಿಸುವುದು ಹಾಗೂ ಹೈಡ್ರೋ-ಫ್ರಾಕ್ಚರಿಂಗ್, ನೀರು ಸರಬರಾಜು ಪೈಪುಗಳ ದುರಸ್ತಿ / ಬದಲಾವಣೆ ಕಾಮಗಾರಿಗಳು ಮತ್ತು ಅತ್ಯವಶ್ಯಕತೆ ಇದ್ದಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗುತ್ತದೆ.<br>• ಅನುಮೋದನೆ ನೀಡಿರುವ ಅನುದಾನವನ್ನು ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಉಪಯೋಗಿಸಲಾಗುತ್ತದೆ.<br>• ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯಕವಿರುವ ಪಂಪು, ಮೋಟಾರ್, ಪೈಪ್‌ಲೈನ್ ಮತ್ತು ಇತರೆ ಸಲಕರಣೆಗಳ ಸಂಗ್ರಹಣೆಯನ್ನು ಕೆಟಿಪಿಪಿ ಕಾಯ್ದೆ-1999 ಮತ್ತು ನಿಯಮಗಳು-2000ರನ್ವಯ ನಿಯಮಾನುಸಾರ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಕೈಗೊಳ್ಳಲಾಗುತ್ತದೆ.<br>• ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಬೇಸಿಗೆಯಲ್ಲಿ ಉಂಟಾಗಲಿರುವ ಕುಡಿಯುವ ನೀರಿನ ಕೊರತೆಯನ್ನು ಪರಿಗಣಿಸಿ ಅನುದಾನವನ್ನು ಬಳಸಿಕೊಳ್ಳಲು ಕ್ರಮ ವಹಿಸಲಾಗುತ್ತದೆ.<br><br>ಸದರಿ ಯೋಜನೆಯಡಿಯಲ್ಲಿ ಕಳೆದ 2 ವರ್ಷಗಳಲ್ಲಿ ಹಂಚಿಕೆಯಾಗಿ ಬಿಡುಗಡೆಯಾದ ಅನುದಾನದ ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಿದೆ.<br><br>**<u>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWSDB):</u>**<br><br>ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಂಡಳಿ ವತಿಯಿಂದ ಕೈಗೊಂಡಿರುವ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗಳ ವಿವರ ಕೆಳಕಂಡಂತಿದೆ.<br><br>**1. ಮಡಿಕೇರಿ, ನಗರಸಭೆ :**<br>ನೀರು ಸರಬರಾಜು ವ್ಯವಸ್ಥೆ: ನಗರಸಭೆ, ಮಡಿಕೇರಿ ವತಿಯಿಂದ ನಿರ್ವಹಿಸಲಾಗುತ್ತಿದೆ.<br>ಒಳಚರಂಡಿ ವ್ಯವಸ್ಥೆ : ಕಾಮಗಾರಿ ಪುಗತಿಯಲ್ಲಿದೆ.<br>**2. ಕುಶಾಲನಗರ, ಪುರಸಭೆ :**<br>ನೀರು ಸರಬರಾಜು ವ್ಯವಸ್ಥೆ: ಮಂಡಳಿ ವತಿಯಿಂದ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ.<br>ಒಳಚರಂಡಿ ವ್ಯವಸ್ಥೆ: ಕಾಮಗಾರಿ ಮುಕ್ತಾಯ ಹಂತದಲ್ಲಿದೆ.<br>**3. ವಿರಾಜಪೇಟೆ, ಪುರಸಭೆ:**<br>ನೀರು ಸರಬರಾಜು ವ್ಯವಸ್ಥೆ: ಪುರಸಭೆ, ವಿರಾಜಪೇಟೆ ವತಿಯಿಂದ ನಿರ್ವಹಿಸಲಾಗುತ್ತಿದೆ. |

ಒಳಚರಂಡಿ ವ್ಯವಸ್ಥೆ: ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.

4. **ಸೋಮವಾರಪೇಟೆ, ಪಟ್ಟಣ ಪಂಚಾಯಿತಿ :**

ನೀರು ಸರಬರಾಜು ವ್ಯವಸ್ಥೆ: ಪಟ್ಟಣ ಪಂಚಾಯತ್, ಸೋಮವಾರಪೇಟೆ ವತಿಯಿಂದ ನಿರ್ವಹಿಸಲಾಗುತ್ತಿದೆ.

ಒಳಚರಂಡಿ ವ್ಯವಸ್ಥೆ: ಒಳಚರಂಡಿ ವ್ಯವಸ್ಥೆ ಇರುವುದಿಲ್ಲ

5. **ಪೊನ್ನಂಪೇಟೆ, ಪಟ್ಟಣ ಪಂಚಾಯಿತಿ:**

ನೀರು ಸರಬರಾಜು ವ್ಯವಸ್ಥೆ: ಪಟ್ಟಣ ಪಂಚಾಯತ್, ಪೊನ್ನಂಪೇಟೆ ವತಿಯಿಂದ ನಿರ್ವಹಿಸಲಾಗುತ್ತಿದೆ.

ಒಳಚರಂಡಿ ವ್ಯವಸ್ಥೆ: ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.

**<u>ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC):</u>**

ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪರಿಸರ ಪರಿಹಾರ ನಿಧಿ (NGT) ಹಾಗೂ ಸ್ವಚ್ಛ ಭಾರತ್ ಮಿಷನ್(ನಗರ)-2.0 (SBMU-2.0) ರಡಿ ಜಲಶುದ್ಧಿ ಅಭಿಯಾನ ಕಾರ್ಯಕ್ರಮವನ್ನು (ಬಳಸಿದ ನೀರು ನಿರ್ವಹಣೆ) ಅನುಷ್ಠಾನಗೊಳಿಸಲಾಗುತ್ತಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪರಿಸರ ಪರಿಹಾರ ನಿಧಿ (NGT) ಹಾಗೂ ಸ್ವಚ್ಛ ಭಾರತ್ ಮಿಷನ್(ನಗರ)-2.0 (SBMU-2.0) ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ KUIDFC ವತಿಯಿಂದ ಕೈಗೊಳ್ಳಲಾಗುತ್ತಿರುವ ಒಳಚರಂಡಿ ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

- **ಕುಶಾಲನಗರ :** ಎಸ್.ಬಿ.ಎಂ (ನ) – 2.0 ರಡಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ಉನ್ನತೀಕರಣ / ನಿರ್ಮಾಣ ಮಾಡಲು ರೂ.245.05 ಲಕ್ಷಗಳು ಮಂಜೂರಾಗಿರುತ್ತದೆ. ಸದರಿ ಯೋಜನೆಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸುತ್ತಿದ್ದು, ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
- **ವಿರಾಜಪೇಟೆ :** ಎಸ್.ಬಿ.ಎಂ (ನ) – 2.0 ರಡಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ಉನ್ನತೀಕರಣ / ನಿರ್ಮಾಣ ಮಾಡಲು ರೂ.275.74 ಲಕ್ಷಗಳು ಮಂಜೂರಾಗಿರುತ್ತದೆ. ಸದರಿ ಯೋಜನೆಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದ್ದು ಆಡಳಿತಾತ್ಮಕ ಅನುಮೋದನೆ ಪಡೆಯುವ ಹಂತದಲ್ಲಿರುತ್ತದೆ, ಅನುಮೋದನೆ ದೊರೆತ ನಂತರ ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
- **ಸೋಮವಾರಪೇಟೆ :** ಎಸ್.ಬಿ.ಎಂ (ನ) – 2.0 ರಡಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ (STP) ಉನ್ನತೀಕರಣ / ನಿರ್ಮಾಣ ಮಾಡಲು ರೂ.102.70 ಲಕ್ಷಗಳು ಮಂಜೂರಾಗಿರುತ್ತದೆ. ಸದರಿ ಯೋಜನೆಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

| | | |
|---|---|---|
| | | ➢ **ಮಡಿಕೇರಿ :** NGT ಅನುದಾನದಡಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ. 2000.00 ಲಕ್ಷಗಳು ಹಾಗೂ ಎಸ್.ಬಿ.ಎಂ (ನ) – 2.0 ರಡಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ಉನ್ನತೀಕರಣ / ನಿರ್ಮಾಣ ಮಾಡಲು ರೂ.960.71 ಲಕ್ಷಗಳು ಒಟ್ಟು ರೂ. 2960.71 ಲಕ್ಷಗಳು ಮಂಜೂರಾಗಿರುತ್ತದೆ. ಸದರಿ ಯೋಜನೆಗೆ ಸ್ಥಳದ ಲಭ್ಯತೆಗನುಗುಣವಾಗಿ ಮೊದಲನೇ ಹಂತದಲ್ಲಿ ರೂ.1097.89 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. |
| ಆ) | ಕೊಡಗು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಎಷ್ಟು ಮನೆಗಳಿಗೆ ದಿನಪೂರ್ತಿ ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗಿದೆ; ಎಷ್ಟು ಮನೆಗಳಿಗೆ ಸಂಪರ್ಕ ಕಲ್ಪಿಸಲು ಬಾಕಿ ಇದೆ; | **<u>ಪೌರಾಡಳಿತ ನಿರ್ದೇಶನಾಲಯ:</u>**<br>➢ **ಮಡಿಕೇರಿ ನಗರಸಭೆ** ವ್ಯಾಪ್ತಿಯಲ್ಲಿ ಒಟ್ಟು 5276 ನಲ್ಲಿ ನೀರಿನ ಸಂಪರ್ಕ ಇರುತ್ತದೆ. 2237 ಮನೆಗಳು ಸಂಪರ್ಕ ಹೊಂದಿರುವುದಿಲ್ಲ. ಬೋರ್‌ವೆಲ್, ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ನೀರಿನ ಸಂಪರ್ಕ ಹೊಂದಿರುವವರಿಗೆ ಪ್ರತಿದಿನ 3 ಗಂಟೆವರೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ದಿನಪೂರ್ತಿ ಕುಡಿಯುವ ನೀರಿನ ಸಂಪರ್ಕ ಕಾಮಗಾರಿಯು ಅಮೃತ್ 2.0 ಯೋಜನೆಯಡಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಂಸ್ಥೆಯಿಂದ ಕಾಮಗಾರಿಯು ಪ್ರಗತಿಯಲ್ಲಿಇರುತ್ತದೆ.<br>➢ **ಕುಶಾಲನಗರ ಪುರಸಭೆ** ವ್ಯಾಪ್ತಿಯಲ್ಲಿ ಒಟ್ಟು ಮನೆಗಳ ಸಂಖ್ಯೆ 6452, ಸದರಿ ಮನೆಗಳಿಗೆ ಕುಡಿಯುವ ನೀರಿನ ಸರಬರಾಜು ಮತ್ತು ನಿರ್ವಹಣೆಯನ್ನು KUWS&DB ರವರಿಂದ ನಿರ್ವಹಿಸಲಾಗುತ್ತಿದೆ ಹಾಗೂ ಎಲ್ಲಾ ಮನೆಗಳಿಗೆ ದಿನಬಿಟ್ಟುದಿನ ಕುಡಿಯುವ ನೀರಿನ ಸರಬರಾಜು ಮಾಡಲಾಗುತ್ತಿದೆ.<br>➢ **ವಿರಾಜಪೇಟೆ ಪುರಸಭೆ** ವ್ಯಾಪ್ತಿಯಲ್ಲಿ ಒಟ್ಟು 2219 ಮನೆಗಳಿಗೆ ನೀರಿನ ಸಂಪರ್ಕ ಇರುತ್ತದೆ. 1254 ಮನೆಗಳು ನೀರಿನ ಸಂಪರ್ಕ ಹೊಂದಿರುವುದಿಲ್ಲ. ದಿನಬಿಟ್ಟುದಿನ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಅಮೃತ್ 2.0 ಯೋಜನೆ ಕುಡಿಯುವ ನೀರು ಕಾಮಗಾರಿಯು ಚಾಲನೆಯಲ್ಲಿದ್ದು, ಮನೆಮನೆಗೆ ಕುಡಿಯುವ ನೀರಿನ ಸಂಪರ್ಕ ಪ್ರಗತಿಯಲ್ಲಿರುತ್ತದೆ.<br>➢ **ಸೋಮವಾರಪೇಟೆ ಪಟ್ಟಣ ಪಂಚಾಯಿತಿ** ವ್ಯಾಪ್ತಿಯಲ್ಲಿ ಒಟ್ಟು 1739 ಮನೆಗಳಿಗೆ ನೀರಿನ ಸಂಪರ್ಕ ಇರುತ್ತದೆ. 37 ಮನೆಗಳು ನೀರಿನ ಸಂಪರ್ಕ ಹೊಂದಿರುವುದಿಲ್ಲ. ದಿನಬಿಟ್ಟುದಿನ ಕುಡಿಯುವ ನೀರನ್ನು 2 ಗಂಟೆ ಪೂರೈಕೆ ಮಾಡಲಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಅಮೃತ್ 2.0 ಯೋಜನೆ ಕುಡಿಯುವ ನೀರು ಕಾಮಗಾರಿಯು ಚಾಲನೆಯಲ್ಲಿದ್ದು, ಮನೆಮನೆ ಕುಡಿಯುವ ನೀರಿನ ಸಂಪರ್ಕ ಪ್ರಗತಿಯಲ್ಲಿರುತ್ತದೆ. |

➢ **ಪೊನ್ನಂಪೇಟೆ ಪಟ್ಟಣ ಪಂಚಾಯಿತಿ** ವ್ಯಾಪ್ತಿಯಲ್ಲಿ ಒಟ್ಟು 735 ಮನೆಗಳಿಗೆ ನೀರಿನ ಸಂಪರ್ಕ ಇರುತ್ತದೆ. 400 ಮನೆಗಳು ನೀರಿನ ಸಂಪರ್ಕ ಹೊಂದಿರುವುದಿಲ್ಲ. 03 ದಿನಕೊಮ್ಮೆ ಕುಡಿಯುವ ನೀರನ್ನು 2 ಗಂಟೆ ಪೂರೈಕೆ ಮಾಡಲಾಗುತ್ತಿದೆ.

**<u>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWSDB):</u>**

ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ KUWSDB ವತಿಯಿಂದ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಯಗಳ ವಿವರ ಕೆಳಕಂಡಂತಿದೆ.

➢ **ಮಡಿಕೇರಿ ನಗರಸಭೆ** : ಪ್ರಸ್ತುತ ದಿನಂಪ್ರತಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಅಮೃತ್ 2.0 ಯೋಜನೆಯಡಿಯಲ್ಲಿ ನಗರದ ವಲಯ-1 & 2 ರಲ್ಲಿ 3818 ಸಂಖ್ಯೆ ಗೃಹ ಸಂಪರ್ಕಗಳಿಗೆ ದಿನ ಪೂರ್ತಿ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಹಾಗೂ ನಗರಕ್ಕೆ ನೀರು ಸರಬರಾಜು ಅಭಿವೃದ್ಧಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.

➢ **ಕುಶಾಲನಗರ ಪುರಸಭೆ**: ಪ್ರಸ್ತುತ ದಿನಂಪ್ರತಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಅಮೃತ್ 2.0 ಯೋಜನೆಯಡಿಯಲ್ಲಿ ಪಟ್ಟಣದ ವಲಯ-3 ರಲ್ಲಿ 375 ಸಂಖ್ಯೆ ಗೃಹ ಸಂಪರ್ಕಗಳಿಗೆ ದಿನ ಪೂರ್ತಿ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಹಾಗೂ ಪಟ್ಟಣಕ್ಕೆ ನೀರು ಸರಬರಾಜು ಅಭಿವೃದ್ಧಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.

➢ **ವಿರಾಜಪೇಟೆ ಪುರಸಭೆ**: ಪ್ರಸ್ತುತ ದಿನಂಪ್ರತಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಅಮೃತ್ 2.0 ಯೋಜನೆಯಡಿಯಲ್ಲಿ ಪಟ್ಟಣದ ವಲಯ-3 ರಲ್ಲಿ 1196 ಸಂಖ್ಯೆ ಗೃಹ ಸಂಪರ್ಕಗಳಿಗೆ ದಿನ ಪೂರ್ತಿ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಹಾಗೂ ಪಟ್ಟಣಕ್ಕೆ ನೀರು ಸರಬರಾಜು ಅಭಿವೃದ್ಧಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.

➢ **ಸೋಮವಾರಪೇಟೆ ಪಟ್ಟಣ ಪಂಚಾಯಿತಿ** : ಪ್ರಸ್ತುತ ದಿನಂಪ್ರತಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಅಮೃತ್ 2.0 ಯೋಜನೆಯಡಿಯಲ್ಲಿ ಪಟ್ಟಣದ ವಲಯ-1 ರಲ್ಲಿ 702 ಸಂಖ್ಯೆ ಗೃಹ ಸಂಪರ್ಕಗಳಿಗೆ ದಿನ ಪೂರ್ತಿ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಹಾಗೂ ಪಟ್ಟಣಕ್ಕೆ ನೀರು ಸರಬರಾಜು ಅಭಿವೃದ್ಧಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.

➢ **ಪೊನ್ನಂಪೇಟೆ ಪಟ್ಟಣ ಪಂಚಾಯಿತಿ** : ಪ್ರಸ್ತುತ ದಿನಂಪ್ರತಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಅಮೃತ್ 2.0 ಯೋಜನೆಯಡಿಯಲ್ಲಿ ಪಟ್ಟಣದ 2700 ಸಂಖ್ಯೆ ಗೃಹಸಂಪರ್ಕಗಳಿಗೆ ದಿನಂಪ್ರತಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಅನುವು ಮಾಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ

| | | |
|---|---|---|
| | | ನೀಡಲಾಗಿದ್ದು, ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಬೇಕಿರುತ್ತದೆ. |
| ಇ) | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಎಷ್ಟು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಬಾಕಿ ಇದೆ; | **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWSDB):**<br><br>ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ KUWSDB. ವತಿಯಿಂದ ಕೈಗೊಂಡಿರುವ ಒಳಚರಂಡಿ ಯೋಜನೆಯಗಳ ವಿವರ ಕೆಳಕಂಡಂತಿದೆ.<br><br>➢ **ಕುಶಾಲನಗರ ಪುರಸಭೆ :**<br>ಒಳಚರಂಡಿ ವ್ಯವಸ್ಥೆ: ಶೇ.85% ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.<br>➢ **ಮಡಿಕೇರಿ ನಗರಸಭೆ :**<br>ಒಳಚರಂಡಿ ವ್ಯವಸ್ಥೆ: ಶೇ.65% ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.<br>➢ **ವಿರಾಜಪೇಟೆ ಪುರಸಭೆ:**<br>ಒಳಚರಂಡಿ ವ್ಯವಸ್ಥೆ: ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.<br>➢ **ಸೋಮವಾರಪೇಟೆ ಪಟ್ಟಣ ಪಂಚಾಯಿತಿ :**<br>ಒಳಚರಂಡಿ ವ್ಯವಸ್ಥೆ: ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.<br>➢ **ಪೊನ್ನಂಪೇಟೆ ಪಟ್ಟಣ ಪಂಚಾಯಿತಿ :**<br>ಒಳಚರಂಡಿ ವ್ಯವಸ್ಥೆ: ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.<br><br>**ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC):**<br><br>ಕೊಡಗು ಜಿಲ್ಲೆಯಲ್ಲಿ ಮಡಿಕೇರಿ ನಗರಕ್ಕೆ KUIDFC ವತಿಯಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪರಿಸರ ಪರಿಹಾರ ನಿಧಿ (NGT)ಯಡಿ ನಗರಸಭೆ ವ್ಯಾಪ್ತಿಯ 14 ವಲಯಗಳಲ್ಲಿ ಒಟ್ಟು 30.00 ಕಿ.ಮೀ. ಒಳಚರಂಡಿ ಜಾಲ ಅಳವಡಿಸುವುದು ಬಾಕಿ ಇದ್ದು ಸ್ಥಳದ ಲಭ್ಯತೆಗನುಗುಣವಾಗಿ ಮೊದಲನೇ ಹಂತದ ಕಾಮಗಾರಿಯಲ್ಲಿ 9.40 ಕಿ.ಮೀ. ಒಳಚರಂಡಿ ಜಾಲ ಅಳವಡಿಸಲು ಯೋಜನೆ ರೂಪಿಸಲಾಗಿದ್ದು, ಟೆಂಡರ್ ಆಹ್ವಾನಿಸಲಾಗಿರುತ್ತದೆ.<br><br>ಬಾಕಿ ಇರುವ 20.60 ಕಿ.ಮೀ. ಒಳಚರಂಡಿ ಜಾಲವನ್ನು ಲಭ್ಯವಿರುವ NGT ಅನುದಾನಕ್ಕೆ ಅನುಗುಣವಾಗಿ ಎರಡನೇ ಹಂತದಲ್ಲಿ ಕಲ್ಪಿಸಲು ಯೋಜನೆ ರೂಪಿಸಲಾಗುವುದು. |
| ಈ) | ಮಡಿಕೇರಿ ನಗರದ ಕಸ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಮಾಡಲಾಗುತ್ತಿದೆ; ನಿರ್ವಹಣೆಯನ್ನು ಹೊರಗುತ್ತಿಗೆ ನೀಡಲಾಗಿದೆಯೇ? (ವಿವರ ನೀಡುವುದು) | • ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ 24 ಟನ್ ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಘನತ್ಯಾಜ್ಯ ವಸ್ತು ನಿರ್ವಹಣೆಯ ವಿಸ್ತೃತ ಯೋಜನಾ ವರದಿಯಂತೆ ಕಸ ಸಂಗ್ರಹಣಾ ವಾಹನಗಳನ್ನು ಖರೀದಿಸಲಾಗಿದ್ದು, ಸದರಿ ವಾಹನಗಳಲ್ಲಿ ವಿಂಗಡಿಸಿದ ಹಸಿ ಮತ್ತು ಒಣ ತ್ಯಾಜ್ಯವನ್ನು ನಗರಸಭೆಯ ಕರ್ಣಂಗೇರಿ ಗ್ರಾಮದ 6 ಏಕರೆ ವಿಸ್ತೀರ್ಣದಲ್ಲಿ ಸ್ಥಾಪನೆ ಮಾಡಲಾಗಿರುವ ಘನತ್ಯಾಜ್ಯ ನಿರ್ವಹಣೆ ಘಟಕದಲ್ಲಿ ವಿಲೇ |

| | | |
|---|---|---|
| | | ಮಾಡಲಾಗುತ್ತಿದೆ.<br>• ಪ್ರತಿ ನಿತ್ಯ ಪಿಟ್ ಕಾಂಪೋಸ್ಟಿಂಗ್ ವಿಧಾನದಲ್ಲಿ 6.72 TPD ಹಸಿ ತ್ಯಾಜ್ಯದಿಂದ ಗೊಬ್ಬರ ತಯಾರಿಸಲಾಗುತ್ತಿದೆ ಮತ್ತು 2 TPD ಒಣ ತ್ಯಾಜ್ಯವನ್ನು DWCC ಘಟಕದಲ್ಲಿ ಮರು ವಿಂಗಡಣೆ ಮಾಡಿ ವಿಲೇ ಮಾಡಲಾಗುತ್ತಿದೆ. ಮುಂದುವರೆದು ಕರ್ಣಂಗೇರಿ ಘನತ್ಯಾಜ್ಯ ವಿಲೇವಾರಿ ಘಟಕ ಕುರಿತು ಉಚ್ಚ ನ್ಯಾಯಾಲಯದಲ್ಲಿ ಪ್ರಕರಣದ ದಾಖಲಾಗಿರುವ ಮೇರೆಗೆ ಹಾಲಿ 2ನೇ ಮೊಣ್ಣಂಗೇರಿ ಗ್ರಾಮದ ಸರ್ವೆ ನಂ. 20/1 ರಲ್ಲಿ 10 ಎಕರೆ ಜಾಗವನ್ನು ಗುರುತಿಸಿದ್ದು, ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವ ಹಂತದಲ್ಲಿರುತ್ತದೆ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಯ ವಿಸ್ತೃತ ಯೋಜನಾ ವರದಿಯಂತೆ ಕಾಮಗಾರಿಗಳು ಟೆಂಡರ್ ಹಂತದಲ್ಲಿರುತ್ತದೆ.<br>• ಸ್ವಚ್ಛ ಭಾರತ್ ಮಿಷನ್(ನಗರ) - 2.0 ಯೋಜನೆಯಡಿ MRF ಘಟಕವು ಸ್ಥಾಪನೆ ಹಂತದಲ್ಲಿದ್ದು, ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮ ವಹಿಸಲಾಗುವುದು.<br>• ಮಡಿಕೇರಿ ನಗರಸಭೆಯ ಕರ್ಣಂಗೇರಿ ಗ್ರಾಮದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ 76636 MT ಪಾರಂಪರಿಕ ತ್ಯಾಜ್ಯ ಶೇಖರಣೆಯಾಗಿದ್ದು, ಸದರಿ ತ್ಯಾಜ್ಯದ ವಿಲೇವಾರಿಗಾಗಿ ಸ್ವಚ್ಛ ಭಾರತ್ ಮಿಷನ್(ನಗರ)-2.0 ಯೋಜನೆಯಡಿ ರೂ.669.31 ಲಕ್ಷಗಳ ವಿಸ್ತೃತ ಯೋಜನಾ ವರದಿಗೆ ಅನುಮೋದನೆ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಎಲ್-1 ಬಿಡ್‌ದಾರರಾದ Utkarsh Balasaheb Patil, M/s Vistacore Infra Projects pvt ltd, Maharashtra ರವರಿಗೆ ದಿನಾಂಕ: 19-03-2025 ರಂದು ಕಾರ್ಯಾದೇಶ ನೀಡಲಾಗಿದೆ.<br>• ಮಡಿಕೇರಿ ನಗರಸಭೆಯ ವ್ಯಾಪ್ತಿಯಲ್ಲಿ ದಿನನಿತ್ಯ ಉತ್ಪತ್ತಿಯಾಗುವ ತ್ಯಾಜ್ಯವನ್ನು ನಗರಸಭೆ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ, ಹೊರಗುತ್ತಿಗೆ ನೀಡಿರುವುದಿಲ್ಲ. |

(ಕಡತ ಸಂಖ್ಯೆ: ನಅಇ 104 ಸಿಎಸ್ಎಸ್ 2026)

**(ರಹೀಂ ಖಾನ್)**

ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ-1

| ಕ್ರ.ಸ | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಯ ಹೆಸರು | ಯೋಜನೆಗಳು | |
|---|---|---|---|---|
| | | | ಕುಡಿಯುವ ನೀರು | ಕಸ ನಿರ್ವಹಣೆ |
| | | ಮಡಿಕೇರಿ ನಗರಸಭೆ | ಮಡಿಕೇರಿ ನಗರಸಭೆ ವ್ಯಾಪ್ತಿಯು ಕುಡಿಯುವ ನೀರನ್ನು ಕೂಟು ಹೊಳೆ ಮತ್ತು ಕುಂಡ ಮೇಸ್ತ್ರಿ ಕಿರು ಅಣೆಕಟ್ಟೆನಿಂದ ಸರಬರಾಜು ಮಾಡಲಾಗುತ್ತಿದ್ದು, ನಗರಸಭೆಯಿಂದ ನಿರ್ವಹಣೆ ಮಾಡಲಾಗುತ್ತಿದೆ. | ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 24 ಟನ್ ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಕಸ ಸಂಗ್ರಹಣಾ ವಾಹನಗಳನ್ನು ಖರೀದಿಸಲಾಗಿದ್ದು, ಸದರಿ ವಾಹನಗಳಲ್ಲಿ ವಿಂಗಡಿಸಿದ ಹಸಿ ಮತ್ತು ಒಣ ತ್ಯಾಜ್ಯವನ್ನು ನಗರಸಭೆಯ ಕರ್ಣಂಗೇರಿ ಗ್ರಾಮದ 6 ಏಕರ ವಿಸ್ತೀರ್ಣದಲ್ಲಿ ಸ್ಥಾಪನ ಮಾಡಲಾಗಿರುವ ಘನತ್ಯಾಜ್ಯ ನಿರ್ವಹಣೆ ಘಟಕದಲ್ಲಿ ವಿಲೇ ಮಾಡಲಾಗುತ್ತಿದೆ. ಪ್ರತಿನಿತ್ಯ ಪಿಟ್ ಕಾಂಪೋಸ್ಟಿಂಗ್ ವಿಧಾನದಲ್ಲಿ 6.72 ಟಿ.ಪಿ.ಡಿ ಹಸಿ ತ್ಯಾಜ್ಯದಿಂದ ಟ್ರಾಮೆಲ್ ಯಂತ್ರದ ಗೊಬ್ಬರ ತಯಾರಿಸಲಾಗುತ್ತಿದೆ ಮತ್ತು 2 ಟಿ.ಪಿ.ಡಿ ಒಣ ತ್ಯಾಜ್ಯವನ್ನು DWCC ಘಟಕದಲ್ಲಿ ಮರು ವಿಂಗಡಣೆ ಮಾಡಿ ವಿಲೇ ಮಾಡಲಾಗುತ್ತಿದೆ. ಮುಂದುವರೆದು ಕರ್ಣಂಗೇರಿ ಘನತ್ಯಾಜ್ಯ ವಿಲೇವಾರಿ ಘಟಕ ಕುರಿತು ಉಚ್ಚ ನ್ಯಾಯಾಲಯದಲ್ಲಿ ಪ್ರಕರಣದ ದಾಖಲಾಗಿರುವ ಮೇರೆಗೆ ಹಾಲಿ 2 ನೇ ಮೊಣ್ಣಂಗೇರಿ ಗ್ರಾಮದ ಸರ್ವೆ ನಂ 20/1 ರಲ್ಲಿ 10 ಎಕರೆ ಜಾಗವನ್ನು ಗುರುತಿಸಿದ್ದು, ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವ ಹಂತದಲ್ಲಿರುತ್ತದೆ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಯ ವಿಸ್ತೃತ ಯೋಜನಾ ವರದಿಯಂತೆ ಕಾಮಗಾರಿಗಳು ಟೆಂಡರ್ ಹಂತದಲ್ಲಿರುತ್ತದೆ. ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಎಂ.ಆರ್. ಎಫ್ ಘಟಕವು ಸ್ಥಾಪನೆ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮವಹಿಸಸಲಾಗುವುದು. |
| | | ಕುಶಾಲನಗರ ಪುರಸಭೆ | ಕುಶಾಲನಗರ ಪುರಸಭೆ ವ್ಯಾಪ್ತಿಯ ಕುಡಿಯುವ ನೀರನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಒಳಚರಂಡಿ ಯೋಜನೆಯನ್ನು 4.5 ಎಂ ಎಲ್ ಡಿ ಸಾಮರ್ಥ್ಯದ ಎಸ್.ಟಿ.ಪಿ ಘಟಕ ಸ್ಥಾಪಿಸಿ ಚಾಲನಗೊಳಿಸಲಾಗಿದ್ದು, ಮನೆಗಳ ಸಂಪರ್ಕ ನೀಡಲು ಪೈಪ್‌ಲೈನ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. | ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 10.71 ಟನ್ ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಪುರಸಭೆಯ ಕಸ ಸಂಗ್ರಹಣಾ ವಾಹನಗಳಲ್ಲಿ ವಿಂಗಡಿಸಿದ ಹಸಿ ಕಸ ಮತ್ತು ಒಣ ಕಸ ವನ್ನು ಭುವನ ಗಿರಿ ಗ್ರಾಮದಲ್ಲಿ ಸ್ಥಾಪನೆ ಮಾಡಲಾಗಿರುವ 7.25 ಎಕರೆ ವಿಸ್ತೀರ್ಣದ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ 1.18 ಟಿ.ಪಿ.ಡಿ ಹಸಿ ತ್ಯಾಜ್ಯದಿಂದ ಗೊಬ್ಬರವನ್ನು ತಯಾರಿಸಲಾಗುತ್ತಿದೆ ಮತ್ತು 1.99 ಟಿ.ಪಿ.ಡಿ ಒಣ ತ್ಯಾಜ್ಯವನ್ನು DWCC ಘಟಕದಲ್ಲಿ ಮರು ವಿಂಗಡಣೆ ಮಾಡಿ ವಿಲೇ ಮಾಡಲಾಗುತ್ತಿದೆ. ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಟ್ರಾಮೆಲ್ ಯಂತ್ರವು ಸ್ಥಾಪನೆ ಹಂತದಲ್ಲಿರುತ್ತದೆ ಮತ್ತು ಎಂ.ಆರ್.ಎಫ್ ಘಟಕದಲ್ಲಿ ಯಂತ್ರಗಳನ್ನು ಅಳವಡಿಸುವ ಹಂತದಲ್ಲಿದ್ದು, ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು. |

| ಕ್ರ.ಸ | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಯ ಹೆಸರು | ಯೋಜನೆಗಳು | |
|---|---|---|---|---|
| | | | ಕುಡಿಯುವ ನೀರು | ಕಸ ನಿರ್ವಹಣೆ |
| | ಕೊಡಗು | ವಿರಾಜಪೇಟೆ ಪುರಸಭೆ | ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಕುಡಿಯುವ ನೀರನ್ನು ಬೇತ್ರಿ ಜಾಕ್ವೆಲ್ ಮುಖಾಂತರ ಕಾವೇರಿ ಹೊಳೆಯಿಂದ ನೀರನ್ನು ಪಡೆದು ಶಿವಕೇರಿ ನೀರು ಶುದ್ಧೀಕರಣ ಘಟಕದಿಂದ ಸಂಸ್ಕರಣೆ ಮಾಡಿ ಪುರಸಭೆಯಿಂದ ನೀರನ್ನು ಪ್ರತಿ ನಿಮ್ಮ ನೀರನ್ನು ಪಡೆದು ಸರಬರಾಜು ಮಾಡಲಾಗುತ್ತಿದೆ. | ವಿರಾಜಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 9 ಟನ್ ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಪುರಸಭೆಯ ಕಸ ಸಂಗ್ರಹಣಾ ವಾಹನಗಳಲ್ಲಿ ವಿಂಗಡಿಸಿದ ಹಸಿ ಕಸ ಮತ್ತು ಒಣ ಕಸ ವನ್ನು ಆರ್ಜಿ ಗ್ರಾಮದ ಪೆರುಂಬಾಡಿಯಲ್ಲಿ ಸ್ಥಾಪನೆ ಮಾಡಲಾಗಿರುವ 4 ಎಕರೆ ವಿಸ್ತೀರ್ಣದ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ 3.5 ಟಿ.ಪಿ.ಡಿ ಹಸಿ ತ್ಯಾಜ್ಯದಿಂದ ಗೊಬ್ಬರವನ್ನು ತಯಾರಿಸಲಾಗುತ್ತಿದೆ ಮತ್ತು 1.0 ಟಿ.ಪಿ.ಡಿ ಒಣ ತ್ಯಾಜ್ಯವನ್ನು ಎಂ.ಆರ್.ಎಫ್ ಘಟಕದಲ್ಲಿ ಮರು ವಿಂಗಡಣೆ ಮಾಡಿ ವಿಲೇ ಮಾಡಲಾಗುತ್ತಿದೆ. ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಎಕ್ಸ್‌ಪ್ರೆಸ್ ವಿದ್ಯುತ್ ಸಂಪರ್ಕ ಪಡೆಯಲು ಕ್ರಮವಹಿಸಲಾಗುತ್ತಿದ್ದು, ನಂತರ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು. |
| | | ಸೋಮವಾರ ಪಟ್ಟಣ ಪಂಚಾಯಿತಿ | ಸೋಮವಾರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕುಡಿಯುವ ನೀರನ್ನು ದುದ್ದಲ್ ಮತ್ತು ಹಾರಂಗಿ ನದಿಯಿಂದ ಸರಬರಾಜು ಮಾಡುತ್ತಿದ್ದು, ಪಟ್ಟಣ ಪಂಚಾಯಿತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. | ಸೋಮವಾರ ಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 3 ಟನ್ ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಪಟ್ಟಣ ಪಂಚಾಯಿತಿ ಕಸ ಸಂಗ್ರಹಣಾ ವಾಹನಗಳಲ್ಲಿ ವಿಂಗಡಿಸಿದ ಹಸಿ ಕಸ ಮತ್ತು ಒಣ ಕಸ ವನ್ನು ಸಿದ್ದಲಿಂಗಪುರ ಗ್ರಾಮದಲ್ಲಿ ಸ್ಥಾಪನೆ ಮಾಡಲಾಗಿರುವ 2 ಎಕರೆ ವಿಸ್ತೀರ್ಣದ ಪಟ್ಟಣ ಪಂಚಾಯಿತಿಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ 0.65 ಟಿ.ಪಿ.ಡಿ ಹಸಿ ತ್ಯಾಜ್ಯದಿಂದ ಗೊಬ್ಬರವನ್ನು ತಯಾರಿಸಲಾಗುತ್ತಿದೆ ಮತ್ತು 1.5 ಟಿ.ಪಿ.ಡಿ ಒಣ ತ್ಯಾಜ್ಯವನ್ನು DWCC ಘಟಕದಲ್ಲಿ ಮರು ವಿಂಗಡಣೆ ಮಾಡಿ ವಿಲೇ ಮಾಡಲಾಗುತ್ತಿದೆ. ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಟ್ರಾಮೆಲ್ ಯಂತ್ರವು ಸ್ಥಾಪನೆ ಹಂತದಲ್ಲಿರುತ್ತದೆ ಮತ್ತು ಎಂ.ಆರ್ ಎಫ್ ಘಟಕದಲ್ಲಿ ಯಂತ್ರಗಳನ್ನು ಅಳವಡಿಸುವ ಹಂತದಲ್ಲಿದ್ದು, ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು. |
| | | ಪೊನ್ನಂಪೇಟೆ ಪಟ್ಟಣ ಪಂಚಾಯಿತಿ | ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕುಡಿಯುವ ನೀರನ್ನು ಕೊಳವೆ ಬಾವಿ ಮತ್ತು ತೆರೆದ ಬಾವಿಗಳ ಮೂಲಕ ಸರಬರಾಜು ಮಾಡಲಾಗುತ್ತಿದೆ. | ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 2.5 ಟನ್ ತ್ಯಾಜ್ಯವು ಉತ್ಪತ್ತಿಯಾಗುತ್ತಿದೆ. ಪಟ್ಟಣ ಪಂಚಾಯಿತಿ ಕಸ ಸಂಗ್ರಹಣಾ ವಾಹನಗಳಲ್ಲಿ ಒಣ ಕಸ ವನ್ನು ಮಾತ್ರ ಸಂಗ್ರಹಿಸಲಾಗುತ್ತಿದ್ದು, ಸದರಿ ತ್ಯಾಜ್ಯವನ್ನು DWCC ಘಟಕದಲ್ಲಿ ಮರು ವಿಂಗಡಣೆ ಮಾಡಿ ವಿಲೇ ಮಾಡಲಾಗುತ್ತಿದೆ. ಮನೆ ಮನೆಗಳಲ್ಲಿ ಉತ್ಪತ್ತಿಯಾಗುತ್ತಿರುವ ಹಸಿ ತ್ಯಾಜ್ಯವನ್ನು ತಮ್ಮ ಹಂತದಲ್ಲಿಯೇ ಸಂಸ್ಕರಣೆ ಮಾಡಲಾಗುತ್ತಿದೆ. ಘನತ್ಯಾಜ್ಯ ವಿಲೇವಾರಿ ಘಟಕವನ್ನು ಸ್ಥಾಪನೆ ಮಾಡಲು ಜಾಗವನ್ನು ಗುರುತಿಸುವ ಹಂತದಲ್ಲಿರುತ್ತದೆ. |

ಅನುಬಂಧ-2

## SFC Drinking Water PROGRAMME

Rs. in Lakhs

| SL.NO | District | Name Of the Town | ULB Type | Year | Grants Allocation | Grants Released | Expenditure | Total Approved Works | Works Started | Under Tender Process | Tender to be Invited | No of Works Completed |
|---|---|---|---|---|---|---|---|---|---|---|---|---|
| 1 | Kodagu | Kushalnagara | TP | 2023-24 | 5.50 | 5.50 | 5.49 | 3 | 0 | 0 | 0 | 3 |
| 2 | Kodagu | Madikere | CMC | 2023-24 | 8.23 | 8.23 | 7.38 | 4 | 1 | 0 | 0 | 3 |
| 3 | Kodagu | Somvarpet | TP | 2023-24 | 4.75 | 4.75 | 4.71 | 5 | 0 | 0 | 0 | 5 |
| 4 | Kodagu | Virajpet | TMC | 2023-24 | 5.62 | 5.62 | 5.50 | 4 | 0 | 0 | 0 | 4 |
| | | | | **TOTAL** | **24.10** | **24.10** | **23.08** | **16** | **1** | **0** | **0** | **15** |
| 1 | Kodagu | Kushalnagara | TP | 2024-25 | 6.00 | 6.00 | 1.48 | 2 | 1 | 0 | 0 | 1 |
| 2 | Kodagu | Madikere | CMC | 2024-25 | 9.44 | 9.44 | 1.96 | 2 | 1 | 0 | 0 | 1 |
| 3 | Kodagu | Somvarpet | TP | 2024-25 | 5.00 | 5.00 | 7.33 | 2 | 2 | 0 | 0 | 0 |
| 4 | Kodagu | Virajpet | TMC | 2024-25 | 6.00 | 6.00 | 3.85 | 3 | 1 | 0 | 0 | 2 |
| | | | | **TOTAL** | **26.44** | **26.44** | **14.63** | **9** | **5** | **0** | **0** | **4** |
| 1 | Kodagu | Kushalnagara | TP | 2025-26 | 6.00 | 4.50 | 3.00 | 1 | 0 | 0 | 0 | 1 |
| 2 | Kodagu | Madikere | CMC | 2025-26 | 9.32 | 6.99 | 0.00 | 2 | 2 | 0 | 0 | 0 |
| 3 | Kodagu | Somvarpet | TP | 2025-26 | 5.00 | 3.75 | 7.20 | 2 | 0 | 0 | 0 | 2 |
| 4 | Kodagu | Virajpet | TMC | 2025-26 | 6.00 | 4.50 | 0.00 | 2 | 1 | 0 | 0 | 1 |
| | | | | **TOTAL** | **26.32** | **19.74** | **10.20** | **7** | **3** | **0** | **0** | **4** |